ಶ್ರೀ ಚೌಡರೆಡ್ಡಿ.—ಸರ್ಕಾರದವರು ಮೊದಲಿನಂತೆಯೇ ಅವರು ಮುಂದುವರೆಯುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ ಜನಗಳು ಏನು ಅವರಿಗೆ ಸಂದಾಯ ಮಾಡಬೇಕೋ ದವಸಧಾನ್ಯಗಳನ್ನು ಏನು ಕೊಡಬೇಕೋ ಅದನ್ನು ಅವರಿಗೆ ಕೊಡುತ್ತಾ ಇಲ್ಲ. ಜನಗಳು ಗಲಾಟೆ ಮಾಡುತ್ತಾರೆ. ಆದುದರಿಂದ ಇದರ ಬಗ್ಗೆ ಏನಾದರೂ ಕಾರ್ಯಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೆ ಕೊಡಲೇಬೇಕು ಅಂತ ಸರ್ಕಾರದ ಕಡ್ಡಾಯವೇನೂ ಇಲ್ಲ. ಮೊದಲಿನಿಂದಲೂ ಜನಗಳು ಅವರಿಗೆ ಮಿರಾಸೆ ಏನು ಕೊಡುತ್ತಿದ್ದರೋ ಅದನ್ನು ಅವರು ಕೊಡುತ್ತಾ ಇದ್ದಾರೆ. ಅದರಂತೆಯೇ ಅವರು ಒಪ್ಪಿಕೊಂಡು ಕೆಲಸ ಮಾಡುತ್ತಿದ್ದಾರೆ. ಆದರೆ ಜನಗಳು ಅವರಿಗೆ ಕೊಡದೇಹೋದರೆ ಅದನ್ನು ಬಲವಂತವಾಗಿ ಕೊಡಿಸುವುದಕ್ಕಾಗುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ತೋಟಿ, ತಳವಾರರು ಮತ್ತು ನೀರಗಂಟಿಗಳು ಎಲ್ಲಾ ತಾಲ್ಲೂಕು ಗಳಲ್ಲಿ ಅಭಾಲಿಷ್ ಆಗಿಲ್ಲ ಎಂದು ತಿಳಿಸಿದ್ದೀರಿ. ಹಾಗಾದರೆ ಯಾವ ಯಾವ ತಾಲ್ಲೂಕುಗಳಲ್ಲಿ ಈ ಹುದ್ದೆ ಗಳನ್ನು ಅಬಾಲಿಷ್ ಆಗಿದೆ ಎನ್ನುವುದನ್ನು ತಿಳಿಸುತ್ತೀರಾ ? ಮತ್ತು ಯಾವ ಯಾವ ತಾಲ್ಲೂಕಿನಲ್ಲಿ ತೋಟಿ ತಳವಾರರು ಮತ್ತು ನೀರಗಂಟಿಗಳು ಎಷ್ಟು ಇದ್ದಾರೆ ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಲ್ಲಾ ತಾಲ್ಲೂಕುಗಳಲ್ಲೂ ಅಭಾಲಿಷ್ ಆಗಿಲ್ಲ ಎಂದು ಹೇಳಿಲ್ಲಾ. ಈ ಕಾನೂನು ಇಡೀ ರಾಜ್ಯಕ್ಕೆ ಸಂಬಂಧಪಟ್ಟದ್ದು, ಆದರೆ ಆ ಗ್ರಾಮಾಧಿಕಾರಿಗಳ ಅನುವಂಶಿಕ ಹುದ್ದೆ ಗಳನ್ನು ರದ್ದುಗೊಳಿಸಲಾಗಿದೆ ಎಂದು ಹೇಳಿದ್ದೇನೆ. ಆದರೆ ಈ ತೋಟಿ ತಳವಾರರು ಮತ್ತು ನೀರಗಂಟಿ ಗಳು ಮೊದಲು ಯಾವರೀತಿ ಇದ್ದರೋ ಅದೇ ರೀತಿ ಮುಂದುವರೆಯುತ್ತೇವೆಂದು ಅವರು ಒಪ್ಪಿಕೊಂಡಿ ದ್ದಾರೆ. ಆದರೆ ಎಲ್ಲಾ ತಾಲ್ಲೂಕುಗಳಲ್ಲೂ ಇವರ ಸಂಖ್ಯೆ ಎಷ್ಟು ಇದೆ ಎಂದು ಹೇಳುವುದಕ್ಕೆ ಈಗ ಆ ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಚೌಡ ರೆಡ್ಡಿ.—ಉತ್ತರದಲ್ಲಿ ೫೮೭ ಅರ್ಜಿಗಳಿಗೆ ಕೊಟ್ಟಿರುವ ಹಣವನ್ನು ನಮೂದು ಮಾಡ ಲಾಗಿದೆ. ಆದರೆ ಚಿಂತಾಮಣಿ ತಾಲ್ಲೂಕಿನಿಂದ ಎಷ್ಟು ಅರ್ಜಿಗಳು ಬಂದಿದ್ದವು ? ಮತ್ತು ಎಲ್ಲ ಅರ್ಜಿ ಗಳಿಗೂ ಪೂರ್ತಿ ಹಣ ಸಂದಾಯವಾಗಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಉತ್ತರದಲ್ಲಿ ಹೇಳಿರುವಂತೆ ೫೮೭ ಅರ್ಜಿಗಳ ಪೈಕಿ ೨೨ ಅರ್ಜಿ ಗಳಿಗಾಗಿ ೨೦,೮೫೬– ೧ ಪೈಸೆ ಕೊಡಲಾಗಿದೆ. ಉಳಿದವುಗಳ ಬಗ್ಗೆ ಹೇಳಲು ಇಲ್ಲಿ ಈಗ ತಾಲ್ಲೂಕುವಾರು ಅಂಕಿಗಳು ಇಲ್ಲ. ಆದರೆ ಒಟ್ಟು ಕೋಲಾರ ಜಿಲ್ಲೆಗೆ ಕೊಡಬೇಕಾದ್ದು ೭,೫೫,೭೫೬ ರೂಪಾಯಿಗಳು ಮತ್ತು ಈಗಾಗಲೇ ಎಷ್ಟು ಕೊಡಲಾಗಿದೆ ಎನ್ನುವ ವಿವರಗಳು ಇಲ್ಲ. ಪ್ರತ್ಯೇಕವಾದ ನೋಟೀಸು ಕೊಟ್ಟರೆ ಅವನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಇಂದು ಪ್ರಶ್ನೆಗಳ ಪಟ್ಟಿಯಲ್ಲಿ ಶ್ರೀ ಕೆ. ಸಿದ್ದಯ್ಯನವರ ಪ್ರಶ್ನೆಯನ್ನು ಕೇಳಲು ಶ್ರೀ ಜಯಪ್ರಕಾಶನಾರಾಯಣ್‌ರವರಿಗೆ ಅಥರೈಸೇಷನ್ ಲೆಟರು ಕೊಟ್ಟಿದ್ದರು. ಆದರೆ ಇದರ ಬಗ್ಗೆ ರಾಜ ಮಂತ್ರಿಗಳಾದ ಶ್ರೀ ಮೊಯ್ಲಿಯವರು ಉತ್ತರ ಕೊಡುತ್ತೇನೆಂದು ತಿಳಿಸಿದ್ದಾರೆ. ಮತ್ತು ಅವರು ಕಾನ್ಸಿಲ್‌ಗೆ ಹೋಗಬೇಕಾಗಿದೆ ಅದಕ್ಕಾಗಿ ಇದನ್ನು ಬೇಗನೆ ತೆಗೆದುಕೊಳ್ಳಬೇಕೆಂದು ಬರೆದು ಕಳುಹಿಸಿದ್ದಾರೆ. ನನಗೆ ಇಲ್ಲಿ ಕಾರ್ಯಕಲಾಪಗಳನ್ನು ಸರಿ ತೂಗಿಸಲು ಬಹು ಕಷ್ಟವಾಗುತ್ತದೆ. ಒಂದೇ ಕಾಲದಲ್ಲಿ ಎರಡು ಸಭೆಗಳನ್ನು ನಡೆಸಲು ಆರಂಭ ಮಾಡಿದರೆ ಎಲ್ಲ ಮಂತ್ರಿಗಳೂ ಇಲ್ಲಿ ಹಾಗೂ ಆ ಸದನದಲ್ಲಿ ಇರಲು ಬಹಳ ಕಷ್ಟವಾಗುತ್ತದೆ. ಸರಕಾರದವರು ಇದನ್ನು ಗಮನಿಸಿ ಯಾವ ರೀತಿ ಮಾಡಬಹುದು ಎನ್ನುವುದನ್ನು ಯೋಚನೆ ಮಾಡಬೇಕೆಂದು ಅವರಲ್ಲಿ ಹೇಳುತ್ತೇನೆ ನಾನು ಇಲ್ಲಿ ವಿಷಯಗಳಿಗೆ ವಿರೋಧವಾಗಿ ಹೋಗ ಬೇಕು ಎಂದರೆ ಕಷ್ಟವಾಗುತ್ತದೆ ಆದ್ದರಿಂದ ನಾನು ಸರಕಾರದ ಗಮನವನ್ನು ಇಲ್ಲಿ ಸೆಳೆಯಬೇಕಾಗಿದೆ. ಶ್ರೀ ಸಿದ್ದಯ್ಯನವರ ಪರವಾಗಿ ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್ ಪ್ರಶ್ನೆ ನಂ. ೧೧೩ ಕೇಳಬಹುದು.

Misappropriation in Co-operative Societies

113. Sri M. H. Jayaprakash Narayan (Sirsi) on behalf of Sri K. Siddaiah (Santhemarahalli)—

Will the Minister for Co-operation be pleased to state :—

(*a*) the number of cases reported about misappropriation or loss due to shortage to an extent of Rs. 50,000 and above in various Co-operative Societies in Mysore District during the last three years ;

(*b*) out of them the number of misappropriation cases, if any;

(*c*) the names of Societies where cases as mentioned in clause (*a*) have occurred ?

SRI M. VEERAPPA MOILY (Minister of State for Small Scale Industries) [on behalf of SRI K. H. RANGANATH (Minister for Co-operation)]

(*a*) Four (4).

(*b*) One (1).

(*c*)—1. Tibetian Co-operative Society limited. Bylakuppe.

2. Taluk Agricultural Produce Co-operative Marketing Society Limited, Mysore.

3. Taluk Agricultural Produce Co-operative Marketing Society Limited Nanjangud.

4. Taluk Agricultural Produce Co-operative Marketing Society Limited, T. Narasipur.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಉತ್ತರದಲ್ಲಿ ಹೇಳಿರುವ ನಾಲ್ಕು ಸೊಸೈಟಿಗಳಲ್ಲಿ ಎಷ್ಟು ಮಿಸ್ ಅಪ್ರೊಪ್ರಿಯೇಷನ್ ಆಗಿದೆ ? ಮತ್ತು ಇವುಗಳ ಮೂಲ ಬಂಡವಾಳ ಎಷ್ಟು? ಇದರಲ್ಲಿ ಅವರುಗಳು ಮಾಡಿರುವ ವ್ಯವಹಾರಗಳೇನು ? ಮತ್ತು ಇದರಿಂದ ಆಗಿರತಕ್ಕ ನಷ್ಟವೇನು ? ಮತ್ತು ಶೇಕಡಾವಾರು ಪ್ರಮಾಣದಲ್ಲಿ ಇಲ್ಲಿ ನಷ್ಟವಾಗಿದೆ ? ಇವನ್ನೆಲ್ಲಾ ಕೊಡಲು ಸಾಧ್ಯವೇ ?

† ಶ್ರೀ ವೀರಪ್ಪ ಮೊಯ್ಲಿ —ಮೂಲ ಬಂಡವಾಳದ ಪ್ರಶ್ನೆ, ಈ ಪ್ರಶ್ನೆಗೆ ಸಂಬಂಧ ಪಟ್ಟುದಲ್ಲ. ನಾಲ್ಕು ಸೊಸೈಟಿಗಳಲ್ಲಿ ಆಗಿರತಕ್ಕ ಮಿಸ್ ಅಪ್ರೊಪ್ರಿಯೇಷನ್ ಹಾಗೂ ಷಾರ್ಟೇಜುಗಳನ್ನು ಇಲ್ಲಿ ತಿಳಿಸ ಬಹುದು.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಪ್ರಶ್ನೆಯಲ್ಲಿ ಖಚಿತವಾಗಿ ನಷ್ಟ ಎಷ್ಟಾಗಿದೆ ಎಂದು ಕೇಳಲಾಗಿದೆ. ಇಷ್ಟು ನಷ್ಟವಾಗಲು ಕಾರಣರು ಯಾರು ? ಮತ್ತು ಇದರಲ್ಲಿ ಖಾಸಗೀ ಜನರು ಎಷ್ಟು ವ್ಯವಹಾರ ಮಾಡಿದ್ದಾರೆ ಇವುಗಳ ಪೂರ್ಣ ವಿವರಗಳು ದೊರೆಯದಿದ್ದರೆ ನಾವು ಇಲ್ಲಿ ಆಗಿರುವ ನಷ್ಟದ ಪ್ರಮಾಣವನ್ನು ಗೊತ್ತು ಮಾಡುವುದಾದರೂ ಹೇಗೆ ? ಇದರ ವಿವರಗಳು ಇಲ್ಲಿ ಬೇಕಾಗಿದೆ.

ಶ್ರೀ ವೀರಪ್ಪ ಮೊಯ್ಲಿ.— ಟಿಬೆಟನ್ ಕೋ ಆಪರೇಟೀವ್ ಸೊಸೈಟಿಯಲ್ಲಿ ರೂ ೧,೧೬,೨೮೯-೨೪ ಪೈಸೆ ಮಿಸ್ ಅಪ್ರೊಪ್ರಿಯೇಷನ್ ಆಗಿದೆ. ಈ ಬಗ್ಗೆ ಸ್ವಲ್ಪ ರಿಕವರಿ ಕೂಡ ಆಗಿದೆ, ಎರಡನೆಯದು ಮೈಸೂರು ತಾಲ್ಲೂಕ್ ಅಗ್ರಿಕಲ್‌ಚರಲ್ ಸೊಸೈಟಿಯಲ್ಲಿ ರೂ. ೫೧೧-೯೨ ಪೈಸೆ ಷಾರ್ಟೇಜು ಎಂದು ಇದೆ. ಮೂರನೆಯದು ನಂಜನಗೂಡಿನ ತಾಲ್ಲೂಕು ಅಗ್ರಿಕಲ್‌ಚರಲ್ ಸೊಸೈಟಿಯಲ್ಲಿ ೭೬ ೪೧೨-೧೬ ಪೈಸೆ ಕ್ಲೈಮ್ಸ್ ಹಾಗೂ ಪ್ಯಾಡಿ ಷಾರ್ಟೇಜುಗಳಿಂದ ಆಗಿದೆ. ನಾಲ್ಕನೆಯದು ಟೀನರಸಿಪುರದ ತಾಲ್ಲೂಕಾ ಅಗ್ರಿಕಲ್‌ಚರಲ್ ಮಾರ್ಕೆಟಿಂಗು ಕೋಆಪರೇಟೀವ್ ಸೊಸೈಟಿಯಲ್ಲಿ ೨ ೭೨,೩೬೨-೬೧ ಪೈಸೆ ಷಾರ್ಟೇಜು ಎಂದು ಇದೆ. ಫರ್ಟಿಲೈಸರುಗಳ ಷಾರ್ಟೇಜುಗಳಿಂದಲೂ ಆಗಿದೆ ಎಂದು ಇದೆ.

ಶ್ರೀ ಬಾವುಗೌಡ.— ಮಾನ್ಯ ಮಂತ್ರಿಗಳು ಈಗ ಹೇಳಿದಂತೆ ನಾಲ್ಕು ಸೊಸೈಟಿಗಳಲ್ಲಿ ಆಗಿರುವ ನಷ್ಟಗಳು ಯಾವ ವರ್ಷಗಳಲ್ಲಿ ಆದದ್ದು ? ಮತ್ತು ಇವುಗಳ ಬಗ್ಗೆ ಸರಕಾರ ತೆಗೆದುಕೊಂಡಿರುವ ಕಾರ್ಯ ಕ್ರಮಗಳಾದರೂ ಏನು ?

ಶ್ರೀ ವೀರಪ್ಪ ಮೊಯ್ಲಿ —ಟಿ.ನರಸೀಪುರದ ಸೊಸೈಟಿಯಲ್ಲಿ ೭೨-೭೩ನೇ ಸಾಲಿನಲ್ಲಿ ನಷ್ಟವಾಗಿದೆ. ಮೈಸೂರು ಅಗ್ರಿಕಲ್ಚರಲ್ ಪ್ರಾಡ್ಯೂಸ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ೧೯೭೨-೭೩ನೇ ಸಾಲಿನಲ್ಲಿ ನಷ್ಟ ಆಗಿದೆ. ನಂಜನಗೂಡು ಸೊಸೈಟಿಯಲ್ಲಿ ೧೯೭೨-೭೩ನೇ ಸಾಲಿನಲ್ಲಿ ನಷ್ಟವಾಗಿದೆ. ಇದೇ ರೀತಿ ಟಿ. ನರಸೀಪುರದಲ್ಲಿ ಕೂಡ ೧೯೭೨-೭೩ನೇ ಸಾಲಿನಲ್ಲಿ ಷಾರ್ಟೇಜು ಬಂದಿದೆ.

ಶ್ರೀ ಎಂ. ಎಸ್ ಕೃಷ್ಣನ್.—ಮಿಸ್ ಅಪ್ರೊಪ್ರಿಯೇಷನ್ನೇ ಬೇರೆ, ಷಾರ್ಟೇಜು ಬೇರೆ ಎಂದರೆ ಇದಕ್ಕೆ ಇರುವ ವ್ಯತ್ಯಾಸಗಳೇನಾದರೂ ಏನು ? ಇದನ್ನು ಸ್ಪಷ್ಟಪಡಿಸುತ್ತೀರಾ ?

SRI M. VEERAPPA MOILY.—That amounts to a criminal offence where actually the amount is intentionally misappropriated. As far stock is concerned, sometimes it amounts to theft.

SRI M. S KRISHNAN.—Both are eating up the capital. Both are terrible crimes. Let us know the shortages.

ಶ್ರೀ ಹೆಚ್. ಡಿ ದೇವೇಗೌಡ —ಮಾನ್ಯ ಮಂತ್ರಿಗಳಿಗೆ ಸಹಕಾರ ಇಲಾಖೆ ಪರಿಚಯ ಇಲ್ಲ ಎಂದು ತೋರುತ್ತೆ. ಮಿಸ್ ಅಪ್ರೊಪ್ರಿಯೆಷನ್ ಹಾಗೂ ಷಾರ್ಟೇಜು ಇವುಗಳ ವ್ಯತ್ಯಾಸವೇ ಏನೂ ಇಲ್ಲ ಎಂದು ಹೇಳುವ ಹಾಗೆ ಆಗುತ್ತದೆ ಇದರ ಬಗ್ಗೆ ಅಡಳಿತ ಮಂಡಲಿಯವರ ಮೇಲೆ ಏನಾದರೂ ಕ್ರಮ ತೆಗೆದು ಕೊಂಡಿದ್ದಾರೆಯೇ ? ಮತ್ತು ನಂಜನಗೂಡಿನಲ್ಲಿರುವ ಸೊಸೈಟಿಯ ಸಿಬ್ಬಂದಿಯವರು ವಿಷ ಕುಡಿದು ಸತ್ತು ಹೋದ ಬಗ್ಗೆ ಪತ್ರಿಕೆಗಳಲ್ಲಿ ಕೂಡ ಬಂದಿತ್ತು ? ಆಡಳಿತ ಪಕ್ಷದವರು ಸರಕಾರದ ಮೇಲೆ ಪ್ರಭಾವ ತರಲು ಮುಖ್ಯಮಂತ್ರಿಗಳ ಕಡೆಗೆ ಕೂಡ ಬಂದಿದ್ದರು. It is a well known fact. I want to know what action the Government has taken against the management of these 4 institutions ?

ಶ್ರೀ ವೀರಪ್ಪ ಮೊಯ್ಲಿ.—ವಿವರಗಳನ್ನು ಈಗಾಗಲೇ ತಿಳಿಸಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಿಸ್ ಅಪ್ರೊಪ್ರಿಯೇಷನ್ ಹಾಗೂ ಷಾರ್ಟೇಜುಗಳನ್ನು ಮಾಡಿ ಆನಂತರ ಇಲ್ಲಿನ ಪುಡಾರಿಗಳು ಅಡಳಿತ ಪಕ್ಷಕ್ಕೆ ಪಕ್ಷಾಂತರ ಮಾಡಿದುದರಿಂದ ಇವರ ಮೇಲೆ ಸರಕಾರ ಏನು ಕ್ರಮ ತೆಗೆದುಕೊಳ್ಳಲಿಲ್ಲ ಅಲ್ಲವೇ ?

ಶ್ರೀ ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಲ್ಲ.

ಶ್ರೀ ಎಂ. ಬಿ. ರಾಮಖ್ವಾಮಿ —ಇಲ್ಲಿ ಪ್ರಶ್ನೆ ಖಚಿತವಾಗಿದೆ. ನಾಲ್ಕು ಸೊಸೈಟಿಗಳಲ್ಲಿ ೧೯೭೨-೭೩ನೇ ಸಾಲಿನಲ್ಲಿ ಎಷ್ಟು ನಷ್ಟವಾಗಿದೆ ? ಷಾರ್ಟೇಜು ಎಷ್ಟು ? ಇದಕ್ಕೆ ಕಾರಕರ್ತರು ಯಾರು ? ಮತ್ತು ಆಗ ಅಲ್ಲಿದ್ದ ಅಧ್ಯಕ್ಷರು ಹಾಗೂ ಸೆಕ್ರೆಟರಿಗಳು ಯಾರು ? ಇವುಗಳ ವಿವರಗಳನ್ನೆಲ್ಲಾ ಸರಕಾರ ಒದಗಿಸಬೇಡವೇ ?

ಶ್ರೀ ವೀರಪ್ಪ ಮೊಯ್ಲಿ.—ನೋಟೀಸು ಕೊಟ್ಟರೆ ವಿವರಗಳನ್ನು ಒದಗಿಸಬಹುದು.

1-30 P.M

ಈ ಬಗ್ಗೆ ಉತ್ತರ ಕೊಡಬೇಕೆಂದರೆ, ಈಗಾಗಲೇ ತಾಲ್ಲೂಕ್ ವ್ಯವಸಾಯೋತ್ಪನ್ನ ಸಹಕಾರಿ ಮಾರುಕಟ್ಟೆ ಸಂಘ ಲಿ) ಟಿ. ನರಸೀಪುರ, ಇದನ್ನು ಸೂಪರ್‌ಸೀಡ್ ಮಾಡಿದ್ದೇನೆ. ಉಳಿದ ಸೊಸೈಟಿಗಳ ಬಗ್ಗೆ ಎನ್‌ಕ್ವೈರಿ ನಡೆಯುತ್ತಿದೆ. ಆ ಎನ್‌ಕ್ವೈರಿ ಆದಕೂಡಲೆ ಅದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೇನೆ.

ಶ್ರೀ ಬಾಪೂಗೌಡ.—ಮಾನ್ಯ ಮಂತ್ರಿಗಳು ಈಗ ಎಷ್ಟೆಷ್ಟು ಹಣ ಕೊರತೆಯಾಗಿದೆ ಮತ್ತು ಎಷ್ಟು ದುರುಪಯೋಗವಾಗಿದೆ ಎಂಬುದನ್ನು ಹೇಳಿದರು ಇಂತಹ ಸಂದರ್ಭದಲ್ಲಿ ಸೊಸೈಟಿಯನ್ನು ಸೂಪರ್ ಸೀಡ್ ಮಾಡುವುದು ಮಾತ್ರ ಯೋಗ್ಯವಾದ ಕ್ರಮ ವಾಗುವುದಿಲ್ಲ ಅದಕ್ಕೆ ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಾವು ತಿಳಿಸಬೇಕು;

ಶ್ರೀ ವೀರಪ್ಪ ಮೊಯಿಲಿ.—ಬೈಲುಕುಪ್ಪೆ ಸೊಸೈಟಿಯ ಬಗ್ಗೆ ಎನ್‌ಕ್ವೈರಿಯಾಗುತ್ತದೆ ಅದೆ ರೀತಿ ತಾಲ್ಲೂಕ್ ವ್ಯವಸಾಯೋತ್ಪನ್ನ ಸಹಕಾರಿ ಮಾರಾಟ್ಟೆ ಸಂಘ (ಲಿ) ವೈಸೂರು, ಇದರ ಬಗ್ಗೆ ಸಹ ಎನ್‌ಕ್ವೈರಿಯಾಗುತ್ತಿದೆ. ಮತ್ತು ನಂಜನಗೂಡು ಸೊಸೈಟಿಯ ಬಗ್ಗೆ Dispute has been filed for the recovery of Rs. 31,000. The Deputy Registrar of Co-operative Societies has been requested to get the disputes filed under section 7 for the remaining amounts by getting the properties of the delinquents attached under section 103 before judgment and to file criminal complaint if there is a prima facie offence.

ಶ್ರೀ ಎಚ್. ಡಿ. ದೇವೇಗೌಡ.—ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದು ಯಾವಾಗ ಯಾವ ಯಾವ ಸೊಸೈಟಿಗಳಲ್ಲಿ ಎನ್‌ಕ್ವೈರಿ ಮುಗಿದಿದೆ, ಮತ್ತು ಎನ್‌ಕ್ವೈರಿ ರಿಪೋರ್ಟ್‌ನ್ನು ಈ ಸಭೆಯ ಮುಂದೆ ಇಡುತ್ತೀರಾ ?

ಶ್ರೀ ವೀರಪ್ಪ ಮೊಯಿಲಿ.—ಎನ್‌ಕ್ವೈರಿ ರಿಪೋರ್ಟ್ ಸರ್ಕಾರದ ವತಿಯಲ್ಲಿ ಇಲ್ಲ, ಆ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ವಿವರಗಳನ್ನು ಸಭೆಯ ಮುಂದೆ ಇಡಲಾಗುತ್ತದೆ.

ಶ್ರೀ ಬಾಪೂಗೌಡ.—ಈ ನಾಲ್ಕು ಸೊಸೈಟಿಗಳಲ್ಲಿ ಆಡಿಟ್ ಯಾವಾಗ ಆಯಿತು ಆ ಆಡಿಟ್ ರಿಪೋರ್ಟ್ ಪ್ರಕಾರ ಯಾರ ಯಾರ ಮೇಲೆ ಮಿಸ್-ಅಪ್ರೊಪ್ರಿಯೇಷನ್ ಫಿಕ್ಸ್ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ವೀರಪ್ಪ ಮೊಯಿಲಿ.—ಆಡಿಟ್ ಆದ ಕಾರೀಮು ನನ್ನ ಬಳಿ ಈಗ ಇಲ್ಲ, ಪ್ರತ್ಯೇಕವಾದ ಪ್ರಶ್ನೆ ಯನ್ನು ಈ ಬಗ್ಗೆ ಹಾಕಿದರೆ ಉತ್ತರ ಕೊಡಲಾಗುವುದು,

ಶ್ರೀ ಎಂ. ಎಸ್ ಕೃಷ್ಣನ್.—ಈ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳು ಬಂದಾಗಲೆಲ್ಲಾ ಒಬ್ಬೊಬ್ಬರು ಮಂತ್ರಿಗಳು ಉತ್ತರ ಕೊಡುತ್ತಾರೆ. ಒಂದು ಸಲ ಮಾನ್ಯ ಕೃಷ್ಣ ಅವರು ಉತ್ತರ ಕೊಡುತ್ತಾರೆ, ಇನ್ನೊಂದು ಮಾನ್ಯ ವೀರಪ್ಪ ಮೊಯಿಲಿ ಅವರು ಉತ್ತರ ಕೊಡುತ್ತಿದ್ದಾರೆ, Third time, Mr. H. M. Channabasappa may choose to give reply and the fourth time, Mr. H. Siddaveerappa chooses to give reply. It is not fair to us and it is not fair to them. Let some Minister take up the whole thing and answer in a responsible manner.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಮತ್ತು ನಾನು ಕೇಳಿದ ಕೆಲವು ಪ್ರಶ್ನೆಗಳಿಗೆ ವಿವರಗಳು ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಲು ಇವೇಡ್ ಮಾಡುತ್ತಿದ್ದಾರೆಂದು ನಾನು ಹೇಳುತ್ತಿಲ್ಲ ಆದರೆ ನಮ್ಮ ಪ್ರಶ್ನೆಗಳಿಗೆ ವಿವರ ಒದಗಿಸಿ ಕೊಡುವುದು ಅಗತ್ಯವಿದೆ. ಮೊನ್ನೆ ಗೋರಿಬಿದನೂರಿನಲ್ಲಿ ಪಂಪ್ ಸೆಟ್ಟುಗಳಿಗೆಂದು ಸಾಲ ತೆಗೆದುಕೊಂಡವರು ಅದನ್ನು ಅದಕ್ಕೇ ಉಪಯೋಗ ಮಾಡಲಿಲ್ಲವೆಂಬ ಕಾರಣದಿಂದ ಸಂಬಂಧಪಟ್ಟವರನ್ನು ಪ್ರಾಸಿಕ್ಯೂಟ್ ಮಾಡಿದ್ದಾರೆ. ಆದರೆ ಆ ಲಕ್ಷಗಟ್ಟಲೆ ಹಣವನ್ನು ನುಂಗಿರುವವರ ಬಗ್ಗೆ ಇನ್ನೂ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳುತ್ತಿರುವುದರ ಅರ್ಥವಾದರೂ ಏನು ? ಈ ಬಗ್ಗೆ ಪೂರ್ಣ ವಿವರಗಳು ಬರುವವರೆಗೆ ಈ ಪ್ರಶ್ನೆಯನ್ನು ತಡೆ ಹಿಡಿಯಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

MADAM SPEAKER.—This question is held over.

Difference in Rates of Electricity supplied to Industries and I. P. Sets.

932. SRI ANDANAIAH (Kunigal)—

Will the Minister of State for power be pleased to state:

(*a*) whether there is any differance in electricity rates charged by Karnataka Electricity Board in respect of power supplied to I. P. Sets and for Industries.